**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿ.ಸಿ. ನಂ.4892/2024**

ಫಿರ್ಯಾದಿ : **ಸಖರಾಯಪಟ್ಟಣ ಪೊಲೀಸ್ ಠಾಣೆ**

**ವಿರುದ್ಧ**

ಆರೋಪಿತರು : 1. ಶ್ರೀ ದೇವರಾಜ್ ಬಿನ್ ಹಾಲೇಗೌಡ,
ಸುಮಾರು 50 ವರ್ಷ ವಯಸ್ಸು, ವ್ಯವಸಾಯ,

2. ಶ್ರೀ ಧನಂಜಯ ಬಿನ್ ಹಾಲೇಗೌಡ,
ಸುಮಾರು 48 ವರ್ಷ ವಯಸ್ಸು, ವ್ಯವಸಾಯ,

3. ಶ್ರೀ ಹಾಲೇಗೌಡ ಬಿನ್ ಬಸವೇಗೌಡ,
ಸುಮಾರು 71 ವರ್ಷ ವಯಸ್ಸು, ವ್ಯವಸಾಯ,

4. ಶ್ರೀಮತಿ ಯಮುನಾ ಕೋಂ ಧನಂಜಯ
ಸುಮಾರು 35 ವರ್ಷ ವಯಸ್ಸು, ಮನೆಗೆಲಸ,
ಆರೋಪಿತರಿಬ್ಬರು ವಾಸಃ ನಾಗರಾಳು ಗ್ರಾಮ,
ಸಖರಾಯಪಟ್ಟಣ ಹೋಬಳಿ, ಕಡೂರು ತಾಲ್ಲೂಕು.

## ಃದೋಷಾರೋಪಣೆಃ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕಃ 15.08.2024 ರಂದು ಬೆಳಗ್ಗೆ 11.50 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಸಖರಾಯಪಟ್ಟಣ ಪೋಲೀಸ್ ಠಾಣಾ ಸರಹದ್ದಿನ ನಾಗರಾಳು ಗ್ರಾಮದಲ್ಲಿ ಆರೋಪಿತರಾದ ನೀವು ಸರ್ವೇ ನಂಬರ್ 44 ರ ಜಮೀನಿನಲ್ಲಿ ಕಾಯಿ ಕೀಳುತ್ತಿದ್ದು, ಚಾಸಾ–1 ರವರು ಕೇಳಲು ಬಂದಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ಮತ್ತು 6 ರವರಿಗೆ ಅವಾಚ್ಯವಾಗಿ ಬೈಯ್ದು

ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು **ಭಾರತೀಯ ನ್ಯಾಯಾ ಸಂಹಿತೆ 352 ಸಹವಾಚಕ ಕಲಂ** 3(5)ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮಗಳ ಪೈಕಿ 1 ರಿಂದ 3 ನೇ ಆರೋಪಿತಾದ ನೀವು ಚಾಸಾ-1 ರವರಿಗೆ ಮಚ್ಚು,ದೊಣ್ಣೆಗಳಿಂದ ಹೊಡೆದು ನೋವುಂಟು ಮಾಡಿದ್ದು, ಆದಕಾರಣ 1 ರಿಂದ 3 ನೇ ಆರೋಪಿತರಾದ ನೀವು **ಭಾರತೀಯ ನ್ಯಾಯಾ ಸಂಹಿತೆ** 118(1) **ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ-6 ರವರಿಗೆ ಕೈಗಳಿಂದ ಮತ್ತು ಕಾಲಿನಿಂದ ಹೊಡೆದು ನೋವುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು **ಭಾರತೀಯ ನ್ಯಾಯಾ ಸಂಹಿತೆ** 115(2) **ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ-1 ಮತ್ತು 6 ರವರಿಗೆ ಕೆಎ 66 ಟಿ0.9350 ರ ಟ್ರಾಕ್ಟರನ್ನು ಹತ್ತಿಸಿ ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರಾದ ನೀವು **ಭಾರತೀಯ ನ್ಯಾಯಾ ಸಂಹಿತೆ** 351(2) **ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮಗಳ ಪೈಕಿ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-6 ರವರ ಬಟ್ಟೆಯನ್ನು ಹಿಡಿದು ಎಳೆದಾಡಿ, ಹರಿದು ಹಾಕಿ, ಅವರ ಮಾನಕ್ಕೆ ಕುಂದನ್ನು ಉಂಟು ಮಾಡಿದ್ದು, ಆದಕಾರಣ 1 ಮತ್ತು 2 ನೇ

ಆರೋಪಿತರಾದ ನೀವು **ಭಾರತೀಯ ನ್ಯಾಯಾ ಸಂಹಿತೆ 74 ಸಹವಾಚಕ ಕಲಂ 3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ

ದಿನಾಂಕ 29 ನೇ ಜನವರಿ 2025.

ಸಹಿ/–

**(ಶ್ರೀಮತಿ ಸವಿತರಾಣಿ ಹೆಚ್.ವಿ.)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್‌ಸಿ, ಕಡೂರು.**